1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (315)246
2. ಸದಸ್ಯರ ಹೆಸರು : ಶ್ರೀ ರಾಮಸ್ವಾಮಿಗೌಡ ಬಿ.ಬಿ
3. ಉತ್ತರಿಸುವ ಸಚಿವರ : (ಶ್ರೀ ಡಾ: ವಿ.ಎಸ್.ಆಚಾರ್ಯ)
: ಮಾನ್ಯ ಗೃಹ ಸಚಿವರು

ಅ ಕುಣಿಗಲ್ ವಿಧಾನ ಸಭಾ ಕ್ಷೇತ್ರದ ವಿವಿಧ ಪೊಲೀಸ್ ಠಾಣೆಗಳಲ್ಲಿ ರೈತರ ವಿರುದ್ಧ ಕಳೆದ 3 ವರ್ಷಗಳಿಂದ ಹೂಡಿರುವ ಮೊಕದ್ದಮೆಗಳೆಷ್ಟು (ಪ್ರತಿ ಮೊಕದ್ದಮೆಗಳ ವಿವರಗಳನ್ನು ನೀಡುವುದು);

ಒಟ್ಟು 8 ಮೊಕದ್ದಮೆಗಳನ್ನು ಹೂಡಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ ರೈತರ ವಿರುದ್ಧ ಹೂಡಿರುವ ಮೊಕದ್ದಮೆಗಳನ್ನು ವಾಪಸ್ಸು ಪಡೆಯಲು ಸರ್ಕಾರ ತೀರ್ಮಾನಿಸಿದೆ ಎಂದು ಮುಖ್ಯಮಂತ್ರಿಗಳು ಸದನದಲ್ಲಿ ಪ್ರಕಟಿಸಿದ್ದರೂ, ಈವರೆಗೂ ಆ ಮೊಕದ್ದಮೆಗಳನ್ನು ವಾಪಸ್ಸುಪಡೆಯದಿರಲು ಕಾರಣಗಳೇನು;

ಈ ಪ್ರಕರಣಗಳನ್ನು ಹಿಂದೆ ತೆಗೆದುಕೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.+

ಇ ಈ ಮೊಕದ್ದಮೆಗಳನ್ನು ಸರ್ಕಾರ ವಾಪಸ್ಸು ಪಡೆಯುವುದು ಎಂದಿತ?

ಮೇಲಿನಂತೆ

ಅನುಬಂಧ

ಕುಣಿಗಲ್ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪೊಲೀಸ್ ಠಾಣೆಗಳಲ್ಲಿ ಕಳೆದ ಮೂರು ವರ್ಷಗಳಿಂದ ರೈತರ ಮೇಲೆ ಹೂಡಿರುವ ಮೊಕದ್ದಮೆಗಳ ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ಪೊಲೀಸ್ ಠಾಣೆ ಮತ್ತು ಮೊಕದ್ದಮೆ ಸಂಖ್ಯೆ	ಕೃತ್ಯ ನಡೆದ ದಿನಾಂಕ	ಪಿರ್ಯಾದಿಯ ಹೆಸರು ಮತ್ತು ವಿಳಾಸ	ಪ್ರಕರಣದ ಸಂಕ್ಷಿಪ್ತ ವಿವರ	ಆರೋಪಿಗಳ ಹೆಸರು ಮತ್ತು ವಿಳಾಸ	ಸಿ.ಸಿ.ನಂಬರ್
1	ಕುಣಿಗಲ್ ಪೊ.ಠಾ.ಮೊ.ಸಂ.225/2006 ಕಲಂ 143–147–148–353–504–506–127 ರೆ/ವಿ 149 ಐಪಿಸಿ	20–10–2006	ಚಂದ್ರಮೋಹನ್, ಎ.ಇ.ಇ. ಹೇಮಾವತಿ ನಾರಾವಿಭಾಗ, ಹೆಬ್ಬೂರು	ದಿ: 20/10/2006ರಂದು ಕೊತ್ತಗೆರೆ ಕೆರೆಯ ಕೋಡಿಯ ಬಳಿ ಪಿರ್ಯಾದುದಾರರು ತಮ್ಮ ಸಿಬ್ಬಂದಿಯೊಂದಿಗೆ ಜಿಲ್ಲಾಧಿಕಾರಿಗಳ ಆದೇಶದಂತೆ ಕೊತ್ತಗೆರೆ ಕೆರೆಯಿಂದ ಮಂಗಲ ಜಲಾಶಯಕ್ಕೆ ನೀರು ಬಿಡಲು ಜೆಸಿಬಿ ಯಿಂದ ಡ್ರಾಫ್ಟ್ ಚಾನಲ್ ತೆಗೆಯುತ್ತಿರುವಾಗ ಆರೋಪಿಗಳು ಅಕ್ರಮ ಗುಂಪು ಸೇರಿಕೊಂಡು ಕೈಗಳಲ್ಲಿ ಕಲ್ಲುಗಳನ್ನು ಹಿಡಿದುಕೊಂಡು ಅಕ್ರಮ ಕೂಟ ಸೇರಿ ಆವಾಚ್ಯ ಶಬ್ದಗಳಿಂದ ಬೈದು, ಕಲ್ಲುಗಳಿಂದ ಜೆ.ಸಿ.ಬಿ.ಯಂತ್ರಕ್ಕೆ ಹೊಡೆದು, ಗ್ಲಾಸುಗಳನ್ನು ಜಖಂಗೊಳಿಸಿ, ಸರ್ಕಾರಿ ಕೆಲಸ ಮಾಡಲು ಅಡ್ಡಿಪಡಿಸಿ, ಅಧಿಕಾರಿಗಳನ್ನು ಕುರಿತು ನೀವೇನಾದರೂ ಕಾಲುವೆ ತೆಗೆದು ನೀರನ್ನು ಬಿಟ್ಟರೆ ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲವೆಂದು ಪ್ರಾಣಬೆದರಿಕೆ ಹಾಕಿರುತ್ತಾರೆಂದು ತನಿಖೆಯಿಂದ ದೃಢಪಟ್ಟಿರುತ್ತದೆ	ತಿಮ್ಮಯ್ಯ ಬಿನ್ ಗಿರಿಯಪ್ಪ 33 ವರ್ಷ, ವಡ್ಡರಪಾಳ್ಯ, ಕೊತ್ತಗೆರೆ ಹೋಬಳಿ, ಕುಣಿಗಲ್ ತಾ. ಮತ್ತು ಇತರೆ 13 ಜನರು	ಸಿ.ಸಿ.ನಂ.51/2007 ದಿ:25.09.08ರಂದು ವಿಚಾರಣೆ ದಿನಾಂಕ, ನಿಗದಿಯಾಗಿದೆ.

2	ಕುಣಿಗಲ್ ಪೊ.ಠಾ.ಮೊ.ಸಂ.2 26/2006 ಕಲಂ 143–147–148–353–323–324–326–332–333–427 ರೆ/ಪ 149 ಐಪಿಸಿ ಮತ್ತು ಸೆಕ್ಷನ್ 2&3 ಆಫ್ ಕರ್ನಾಟಕ ಪ್ರಿವೆನ್‌ಷನ್ ಆಫ್ ಡಿಸ್ಟಾಕ್ಷನ್ ಪ್ರಾಪರ್ಟಿ ಕಾಯ್ದೆ	21–10–2006	ಚಂದ್ರಮೋಹನ್, ಎ.ಇ.ಇ. ಹೇಮಾವತಿ ನಾಲಾವಿಭಾಗ, ಹೆಬ್ಬೂರು	ದಿನಾಂಕ: 21/10/2008ರಂದು ಕೆರೆಯ ನೀರನ್ನು ಮಂಗಳ ಜಲಾಶಯಕ್ಕೆ ನೀರು ಬಿಟ್ಟು ಜಲಾಶಯದಿಂದ ಅಚ್ಚುಕಟ್ಟು ರೈತರ ಬೆಳೆ ರಕ್ಷಣೆ ಮಾಡುವ ಉದ್ದೇಶದಿಂದ ಜಿಲ್ಲಾಧಿಕಾರಿಗಳು ಸಭೆಯಲ್ಲಿ ನೀಡಿದ ಆದೇಶದಂತೆ 1, 2 ಮತ್ತು 3ನೇ ಸಾಕ್ಷಿಯವರುಗಳನ್ನು ಹಾಗೂ ಇತರರು ಕೋಡಿ ಬಳಿ ಕಾಲುವೆ ನಿರ್ಮಿಸಲು ಹೋದಾಗ, ಆರೋಪಿಗಳು ಅಕ್ರಮ ಗುಂಪು ಸೇರಿಕೊಂಡು ಇತರೆ ಜನರನ್ನು ಸೇರಿಸಿಕೊಂಡು ಕೋಡಿಯಿಂದ ನೀರು ಹರಿಸಲು ಬಿಡುವುದಿಲ್ಲವೆಂದು ಪ್ರತಿಭಟನೆ ನಡೆಸಿ ಆರೋಪಿಗಳು ಉದ್ರಿಕ್ತಗೊಂಡು ಅಧಿಕಾರಿಗಳಿಗೂ ಮತ್ತು ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಯವರು ಕರ್ತವ್ಯ ನಿರ್ವಹಿಸದಂತೆ, ಸರ್ಕಾರಿ ಕೆಲಸಕ್ಕೆ ಅಡ್ಡಪಡಿಸಿ ಏಕಾಏಕಿ ಕಲ್ಲುಗಳಿಂದ ಪೊಲೀಸರಿಗೂ ಮತ್ತು ಪೊಲೀಸ್ ವಾಹನಗಳಿಗೆ ಹೊಡೆದು ಜಖಂಗೊಳಿಸಿ ಕಲ್ಲುಗಳಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯಗೊಳಿಸಿ ಗಲಭೆ ಉಂಟು ಮಾಡಿರುವ ಬಗ್ಗೆ.	ಸುರೇಶಗೌಡ ಬಿನ್ ಬೆಟ್ಟಯ್ಯ, 42 ವರ್ಷ, ಕೆಂಪನಹಳ್ಳಿ, ಹುತ್ರಿದುರ್ಗ ಹೋಬಳಿ, ಕುಣಿಗಲ್ ತಾ. ಮತ್ತು ಇತರೆ 44 ಜನರು	ಸಿ.ಸಿ.ನಂ.702/2007 ದಿ:26.07.08ರಂದು ವಿಚಾರಣೆ ದಿನಾಂಕ, ನಿಗದಿಯಾಗಿದೆ.

3	ಕುಣಿಗಲ್ ಪೊ.ಠಾ.ಮೊ.ಸಂ. 227/2006 ಕಲಂ 143–504–506–127 ರೆ/ವಿ 149ಐಪಿಸಿ	21–10–2006	ಬೆಟ್ಟಸ್ವಾಮಯ್ಯ ಬಿನ್ ಲಿಂಗಯ್ಯ ಭಕ್ತರಹಳ್ಳಿ,	ದಿ: 21/10/2006ರಂದು ಕೆರೆಯ ಕೋಡಿಯ ಬಳಿ ಆರೋಪಿಗಳು ಸಮಾನ ಉದ್ದೇಶದಿಂದ ಪಿರ್ಯಾದುದಾರರನ್ನು ಕುರಿತು ನೀನು ಉದ್ದೇಶಪೂರ್ವಕವಾಗಿ ಜನರನ್ನು ಕರೆದುಕೊಂಡು ಬಂದು ಕೆರೆಯ ಕೋಡಿಯನ್ನು ಒಡೆಸಿ ನೀರು ಬಿಡಿಸಲು ಬಂದಿದ್ದೀರಾ ಎಂದು ಅವಾಚ್ಯ ಶಬ್ದಗಳಿಂದ ಬೈದು, ನಿನ್ನನ್ನು ಹಳ್ಳಕ್ಕೆ ತಳ್ಳಿ ಸಾಯಿಸಿ ಬಿಡುತ್ತೇನೆಂದು ಪ್ರಾಣ ಬೆದರಿಕೆ ಹಾಕಿರುವ ಕುರಿತು	ತಿಮ್ಮಯ್ಯ ಬಿನ್ ಗಿರಿಯಪ್ಪ, 35 ವರ್ಷ, ವಡ್ಡರಪಾಳ್ಯ, ಕೊತ್ತಗೆರೆ ಹೋಬಳಿ, ಕುಣಿಗಲ್ ತಾ. ಮತ್ತು ಇತರೆ 3 ಜನರು	ಸಿ.ಸಿ.ನಂ.933/06 ದಿ:29.08.08 ರಂದು ವಿಚಾರಣೆಯಲ್ಲಿದೆ
4	ಕುಣಿಗಲ್ ಪೊ.ಠಾ.ಮೊ.ಸಂ. 258/2006 ಕಲಂ 143,147,148,323, 324,504 ರೆ/ವಿ 149 ಐಪಿಸಿ	21–10–2006	ನಾರಾಯಣ ಬಿನ್ ರಾಮಣ್ಣ, ಚಿಗನಿಪಾಳ್ಯ	ದಿ: 21–10–2006ರಂದು ಕೊತ್ತಗೆರೆ ಕೆರೆಯಿಂದ ಮಂಗಳ ಜಲಾಶಯಕ್ಕೆ ನೀರು ಹರಿಸುವುದನ್ನು ನೋಡಲು ಹೋಗಿದ್ದ ಪಿರ್ಯಾದುದಾರರಿಗೆ ಆರೋಪಿಗಳು ಅಕ್ರಮ ಗುಂಪು ಸೇರಿಕೊಂಡು ಕೈಗಳಲ್ಲಿ ಜಲ್ಲಿ ಕಲ್ಲುಗಳನ್ನು ಹಿಡಿದುಕೊಂಡು ಉದ್ದೇಶಪೂರ್ವಕವಾಗಿ ನೀನು ಸಹ ನೀರನ್ನು ಕೆರೆಯಿಂದ ಹೊರಗಡೆಗೆ ಹರಿಸಲು ಬಂದಿದ್ದೀಯಾ ಎಂದು ಅವಾಚ್ಯ ಶಬ್ದಗಳಿಂದ ಬೈದು ಕಲ್ಲು ತೂರಾಟ ಮಾಡಿದ್ದು, ಪಿರ್ಯಾದಿಯ ತಲೆಗೆ ಸಾಮಾನ್ಯ ಗಾಯವಾಗಿದ್ದು, ಇಲ್ಲಿಂದ ನೀನು ಹೋಗದಿದ್ದರೆ ಸಾಯಿಸುತ್ತೇನೆಂದು ಪ್ರಾಣ ಬೆದರಿಕೆ ಹಾಕಿರುವ ಕುರಿತು	ಗಂಗಾಧರ ಬಿನ್ ವಡ್ಡರಪ್ಪ, 40 ವರ್ಷ, ಬಾಗೇನಹಳ್ಳಿ ಮತ್ತು ಇತರ 9 ಜನರು	ಸಿ.ಸಿ.ನಂ.934/06 ದಿ:29.08.08ರಂದು ವಿಚಾರಣೆಯಲ್ಲಿದೆ.

5	ಕುಣಿಗಲ್ ಪೊ.ಠಾ.ಮೊ.ಸಂ 259/2006 ಕಲಂ 143–147–148–323–324–325–333–427–504–506ರೆ/ವಿ 149 ಐಪಿಸಿ ಮತ್ತು ಸೆಕ್ಷನ್ 2&3 ಆಫ್ ಕರ್ನಾಟಕ ಪ್ರಿವೆನ್‌ಷನ್ ಆಫ್ ಡಿಸ್ಟಾಕ್ಷನ್ ಪ್ರಾಪರ್ಟಿ ಕಾಯ್ದೆ	21–10–2006	ಶ್ರೀ ಎ.ಆರ್.ಬಲರಾವೆ ಗೌಡ, ಸಿ.ಪಿ.ಐ ಕುಣಿಗಲ್	ದಿ: 21/10/2006 ರಂದು ಕೊತ್ತಗೆರೆ ಕೆರೆಯಿಂದ ಮಂಗಳ ಜಲಾಶಯಕ್ಕೆ ನೀರು ಹರಿಸಲು ಹೇಮಾವತಿ ಇಂಜಿನಿಯರ್ ರವರ ಆದೇಶದಂತೆ ಮಂಗಳ ಜಲಾಶಯಕ್ಕೆ ನೀರನ್ನು ಕಾಲುವೆ ತೆಗೆಸಲು ಮುಂದಾದಾಗ ಆರೋಪಿಗಳು ಅಕ್ರಮ ಗುಂಪು ಸೇರಿಕೊಂಡು ನಾವುಗಳು ಯಾವುದೇ ಕಾರಣಕ್ಕೂ ಮಂಗಳ ಜಲಾಶಯಕ್ಕೆ ನೀರನ್ನು ಬಿಡುವುದಿಲ್ಲವೆಂದು ಗಲಾಟೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು ಸರ್ಕಾರಿ ಕೆಲಸ ಮಾಡದಂತೆ ಅಡ್ಡಿಪಡಿಸಿ, ಸ್ಥಳದಲ್ಲೇ ಬಿದ್ದಿದ್ದ ಜಲ್ಲಿ ಕಲ್ಲುಗಳಿಂದ ಪೊಲೀಸ್ ಸಿಬ್ಬಂದಿಯವರ ಮೇಲೆ ಮತ್ತು ಅಧಿಕಾರಿಗಳ ಮೇಲೆ ಕಲ್ಲು ತೂರಾಟ ಮಾಡಿದಾಗ, ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ರಕ್ತಗಾಯಗಳಾಗಿದ್ದು, ಪೊಲೀಸ್ ವಾಹನಕ್ಕೂ ಕಲ್ಲುಗಳಿಂದ ಜಖಂಗೊಳಿಸಿದಾಗ ಪೊಲೀಸರು ಗುಂಪನ್ನು ಲಘು ಲಾಠಿ ಪ್ರಹಾರದಿಂದ ಚದುರಿಸುತ್ತಾರೆ ಎಂಬುದರ ಕುರಿತು	ಶಿವರಾಮಯ್ಯ ಬಿನ್ ಬೋರಪ್ಪ, 50 ವರ್ಷ, ನರ್ಜುನಕುಪ್ಪೆ, ಮತ್ತು ಇತರೆ 27 ಜನರು	ಸಿ.ಸಿ.ನಂ.753/07 ದಿ:18.07.08ರಂದು ವಿಚಾರಣೆ ದಿನಾಂಕ ನಿಗದಿಯಾಗಿದೆ.

6	ಕುಣಿಗಲ್ ಪೊ.ಠಾ.ಮೊ.ಸಂ. 260/2006 ಕಲಂ 143–147–148–323–353–332–427–504–506 ರೆ/ವಿ 149ಐಪಿಸಿ	21–10–2006	ಪಾಂಡವರಾಜು, ತುಮಕೂರು	ದಿನಾಂಕ: 21/10/2008ರಂದು ಕೆರೆಯ ನೀರನ್ನು ಮಂಗಳ ಜಲಾಶಯಕ್ಕೆ ನೀರು ಬಿಟ್ಟು ಜಲಾಶಯದಿಂದ ಅಚ್ಚುಕಟ್ಟು ರೈತರ ಬೆಳೆ ರಕ್ಷಣೆ ಮಾಡುವ ಉದ್ದೇಶದಿಂದ ಜಿಲ್ಲಾಧಿಕಾರಿಗಳು ಸಭೆಯಲ್ಲಿ ನೀಡಿದ ಆದೇಶದಂತೆ ಕೋಡಿ ಬಳಿ ಕಾಲುವೆ ನಿರ್ಮಿಸಲು ಹೋದಾಗ, ನೀರು ಹರಿಸಲು ಬಿಡುವುದಿಲ್ಲವೆಂದು ಪ್ರತಿಭಟನೆ ನಡೆಸಿ, ಆರೋಪಿತರು ಉದ್ರಿಕ್ತಗೊಂಡು ಅಧಿಕಾರಿಗಳಿಗೂ ಮತ್ತು ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಯವರು ಕರ್ತವ್ಯ ನಿರ್ವಹಿಸದಂತೆ, ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸಿ ಏಕಾಏಕಿ ಗಲಭೆವುಂಟು ಮಾಡುವ ಸಮಾನ ಉದ್ದೇಶದಿಂದ ಅಕ್ರಮಗುಂಪು ಸೇರಿ ಕೋಡಿಹಳ್ಳಿಪಾಳ್ಯಕ್ಕೆ ಹೋಗುವ ರಸ್ತೆಯಲ್ಲಿ ನಿಂತಿದ್ದ ಕೆಎ–06–ಜಿ–369 ವಾಹನಕ್ಕೂ ಹಾಗೂ ಪೊಲೀಸರಿಗೂ ಕಲ್ಲುಗಳಿಂದ ಹೊಡೆದು ಜಖಂಗೊಳಿಸಿ ಸಾಮಾನ್ಯ ಸ್ವರೂಪದ ಗಾಯಗೊಳಿಸಿ ಗಲಭೆ ಉಂಟು ಮಾಡಿರುವ ಕುರಿತು	ಶಿವರಾಮಯ್ಯ ಬಿನ್ ಬೋರಪ್ಪ, 50 ವರ್ಷ, ನರ್ಜುನಕುಪ್ಪೆ, ಮತ್ತು ಇತರೆ 14 ಜನರು	ಸಿ.ಸಿ.ನಂ.703/07 ದಿ:17.07.08ರಂದು ವಿಚಾರಣೆ ದಿನಾಂಕ ನಿಗದಿಯಾಗಿದೆ.

7	ಕುಣಿಗಲ್ ಪೊ.ಠಾ.ಮೊ.ಸಂ. 261/2006 ಕಲಂ 143–147–148–353–323–324–332 427 ರೆ/ವಿ 149 ಐಪಿಸಿ	21–10–2006	ಶ್ರೀ ನರಸಿಂಹಯ್ಯ ಪಿ.ಎಸ್.ಐ. ಅಮೃತೂರು	ದಿನಾಂಕ: 21/10/2008ರಂದು ಕೆರೆಯ ನೀರನ್ನು ಮಂಗಳ ಜಲಾಶಯಕ್ಕೆ ನೀರು ಬಿಟ್ಟು ಜಲಾಶಯದಿಂದ ಅಚ್ಚುಕಟ್ಟು ರೈತರ ಬೆಳೆ ರಕ್ಷಣೆ ಮಾಡುವ ಉದ್ದೇಶದಿಂದ ಜಿಲ್ಲಾಧಿಕಾರಿಗಳು ಸಭೆಯಲ್ಲಿ ನೀಡಿದ ಆದೇಶದಂತೆ ಪಿರ್ಯಾದಿದಾರರು ಕೋಡಿ ಬಳಿ ಕಾಲುವೆ ನಿರ್ಮಿಸಲು ಹೋದಾಗ, ಆರೋಪಿಗಳು ಅಕ್ರಮ ಗುಂಪು ಸೇರಿಕೊಂಡು ಕೋಡಿಯಿಂದ ನೀರು ಹರಿಸಲು ಬಿಡುವುದಿಲ್ಲವೆಂದು ಪ್ರತಿಭಟನೆ ನಡೆಸಿ, ಉದ್ರಿಕ್ತಗೊಂಡು ಅಧಿಕಾರಿಗಳಿಗೆ ಹಾಗೂ ಪೊಲೀಸ್ ಸಿಬ್ಬಂದಿಯವರಿಗೂ ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸಿ ಏಕಾಏಕಿ ಗಲಭೆವುಂಟು ಮಾಡುವ ಸಮಾನ ಉದ್ದೇಶದಿಂದ ಅಕ್ರಮಗುಂಪು ಸೇರಿ ಕೋಡಿಹಳ್ಳಿಪಾಳ್ಯಕ್ಕೆ ಹೋಗುವ ರಸ್ತೆಯಲ್ಲಿ ನಿಂತಿದ್ದ ಕೆಎ–06–ಜಿ–369 ವಾಹನಕ್ಕೂ ಹಾಗೂ ಪೊಲೀಸರಿಗೂ ಕಲ್ಲುಗಳಿಂದ ಹೊಡೆದು ಜಖಂಗೊಳಿಸಿ ಸಾಮಾನ್ಯ ಸ್ವರೂಪದ ಗಾಯಗೊಳಿಸಿ ಗಲಭೆ ಉಂಟು ಮಾಡಿರುವ ಕುರಿತು	ಶಿವರಾಮಯ್ಯ ಬಿನ್ ಬೋರಪ್ಪ, 50 ವರ್ಷ, ನರ್ಜುನಕುಪ್ಪೆ, ಮತ್ತು ಇತರೆ 23 ಜನರು	ಸಿ.ಸಿ.ನಂ.704/07 ದಿ:28.08.08ರಂದು ದಿನಾಂಕ ನಿಗದಿಯಾಗಿದೆ.

8	ಕುಣಿಗಲ್ ಪೊ.ಠಾ.ಮೊ.ಸಂ.262/2006 ಕಲಂ143–147–148–323–324–353–332–333–427–506 ರೆ/ವಿ 149 ಐಪಿಸಿ ಮತ್ತು ಸೆಕ್ಷನ್ 2&3 ಆಫ್ ಕರ್ನಾಟಕ ಪ್ರಿವೆನ್‌ಷನ್ ಆಫ್ ಡಿಸ್ಟ್ರಕ್ಷನ್ ಪ್ರಾಪರ್ಟಿ ಕಾಯ್ದೆ	21–10–2006	ಶ್ರೀ ರಂಗಸ್ವಾಮಿ ಪಿಡಸ್‌ಐ ಹುಲಿಯೂರು ದುರ್ಗ	ದಿನಾಂಕ: 21/10/2006 ರಂದು ಕೆರೆಯ ನೀರನ್ನು ಮಂಗಳ ಜಲಾಶಯಕ್ಕೆ ನೀರು ಬಿಟ್ಟು ಜಲಾಶಯದಿಂದ ಅಚ್ಚುಕಟ್ಟು ರೈತರ ಬೆಳೆ ರಕ್ಷಣೆ ಮಾಡುವ ಉದ್ದೇಶದಿಂದ ಜಿಲ್ಲಾಧಿಕಾರಿಗಳು ಸಭೆಯಲ್ಲಿ ನೀಡಿದ ಆದೇಶದಂತೆ ಪಿರ್ಯಾದಿದಾರರು ಕೋಡಿ ಬಳಿ ಕಾಲುವೆ ನಿರ್ಮಿಸಲು ಹೋದಾಗ, ಆರೋಪಿಗಳು ಅಕ್ರಮ ಗುಂಪು ಸೇರಿಕೊಂಡು ಕೋಡಿಯಿಂದ ನೀರು ಹರಿಸಲು ಬಿಡುವುದಿಲ್ಲವೆಂದು ಪ್ರತಿಭಟನೆ ನಡೆಸಿ, ಉದ್ರಿಕ್ತಗೊಂಡು ಅಧಿಕಾರಿಗಳಿಗೆ ಹಾಗೂ ಪೊಲೀಸ್ ಸಿಬ್ಬಂದಿಯವರಿಗೂ ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸಿ ಏಕಾಏಕಿ ಗಲಭೆವುಂಟು ಮಾಡುವ ಸಮಾನ ಉದ್ದೇಶದಿಂದ ಅಕ್ರಮಗುಂಪು ಸೇರಿ ವಡ್ಡರಪಾಳ್ಯ ರಸ್ತೆಯಲ್ಲಿ ನಿಂತಿದ್ದ ಕೆಎ–06–ಜಿ–324 ವಾಹನಕ್ಕೂ ಹಾಗೂ ಪೊಲೀಸರಿಗೂ ಕಲ್ಲುಗಳಿಂದ ಹೊಡೆದು ಜಖಂಗೊಳಿಸಿ, ಪಿರ್ಯಾದಿಗೆ ಪ್ರಾಣ ಬೆದರಿಕೆ ಹಾಕಿ, ಸಾಮಾನ್ಯ ಸ್ವರೂಪದ ಗಾಯಗೊಳಿಸಿ ಗಲಭೆ ಉಂಟು ಮಾಡಿರುವ ಕುರಿತು	ಲಕ್ಕಮ್ಮ ಕೋ ಕೃಷ್ಣಪ್ಪ, 35 ವರ್ಷ, ವಡ್ಡರಪಾಳ್ಯ, ಕುಣಿಗಲ್ ತಾ ಮತ್ತು ಇತರೆ 16 ಜನರು	ಸಿ.ಸಿ.ನಂ.705/07 ದಿ:23.10.08ರಂದು ದಿನಾಂಕ ನಿಗದಿಯಾಗಿದೆ.